## ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ/2022-23

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 17.06.2022

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 14.06.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 17.06.2022

******

ದಿನಾಂಕ 14.06.2022 ರಂದು ಬೆಳಗ್ಗೆ 11.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ(Special)/2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 15-06-2022

**ದಿನಾಂಕ 14-06-2022 ರಂದು ಬೆಳಗ್ಗೆ 11.30 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.**

**<u>ಹಾಜರಾದ ಸದಸ್ಯರು:</u>**

| | | | |
|---|---|---|---|
| 1. | ಡಾ. ಸಿಂಥಿಯಾ ಮಿನೇಜಸ್<br>ಕುಲಪತಿಗಳು, (ಪ್ರಭಾರ) | – | ಸಭಾಧ್ಯಕ್ಷರು |
| 2. | ಪ್ರೊ. ಯು.ವಿ ಚಂದರಗಿ,<br>ಜಂಟಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ<br>(ಆಯುಕ್ತರ ಪರವಾಗಿ) | – | ಸದಸ್ಯರು |
| 3. | ಡಾ. ಎನ್. ರವಿಚಂದ್ರನ್<br>ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | – | ಸದಸ್ಯರು |
| 4. | ಡಾ. ಸುಧಾಕರ್. ಎಚ್ | – | ಸದಸ್ಯರು |
| 5. | ಶ್ರೀ ಎಂ. ಉದಯಕುಮಾರ್ | – | ಸದಸ್ಯರು |
| 6. | ಶ್ರೀ ಕುಮಾರ ಟಿ, | – | ಸದಸ್ಯರು |
| 7. | ಡಾ. ಧನಂಜಯ ಬಿ.ಆರ್ | – | ಸದಸ್ಯರು |
| 8. | ಡಾ. ಎಂ. ಶೈಲಜ | – | ಸದಸ್ಯರು |
| 9. | ಡಾ. ಗೋವಿಂದರಾಜು | – | ಸದಸ್ಯರು |
| 10. | ಶ್ರೀ ಪ್ರೇಮ್ ಸೋಹನ್‌ಲಾಲ್ | – | ಸದಸ್ಯರು |
| 11. | ಪ್ರೊ. ಟಿ.ವಿ. ರಾಜು | – | ಸದಸ್ಯರು |
| 12. | ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ | – | ಸದಸ್ಯರು |
| 13. | ಪ್ರೊ. ಜಯಕುಮಾರ್ ಜಿ. ರೆಡ್ಡಿ | – | ಸದಸ್ಯರು |
| 14. | ಡಾ. ಕೆ.ಎಂ. ಕುಮಾರಸ್ವಾಮಿ<br>ಉಪ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ<br>(ನಿರ್ದೇಶಕರ ಪರವಾಗಿ) | – | ಸದಸ್ಯರು |
| 15. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | – | ಸದಸ್ಯರು |
| 16. | ಪ್ರೊ. ಎಂ ಕೊಟ್ರೇಶ್,<br>ಕುಲಸಚಿವರು | – | ಸದಸ್ಯ ಕಾರ್ಯದರ್ಶಿ |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ನೂತನವಾಗಿ ಕುಲಪತಿಗಳಾಗಿ (ಪ್ರಭಾರ) ಅಧಿಕಾರ ವಹಿಸಿಕೊಂಡಿರುವ ಡಾ. ಸಿಂಥಿಯಾ ಮಿನೇಜಸ್ ಅವರನ್ನು ಸಭೆಗೆ ಪರಿಚಯಿಸಿ ಸಭೆಯಲ್ಲಿ ಹಾಜರಿದ್ದ ಸರ್ಕಾರದ ಅಧಿಕಾರಿಗಳು ಹಾಗೂ ಎಲ್ಲಾ

Cynthia Menezes
../../2022

ಸದಸ್ಯರುಗಳಿಗೆ ಸ್ವಾಗತ ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಕುಲಪತಿಗಳಲ್ಲಿ ಕೋರಿದರು. ಅವರು ಮುಂದುವರೆದು, ಸಿಂಡಿಕೇಟ್ ಸದಸ್ಯತ್ವದಿಂದ ನಿರ್ಗಮಿಸಿರುವ ಡಾ. ಎನ್. ದಶರಥ್ ಹಾಗೂ ಹಿಂದಿನ ಕುಲಪತಿಯವರ ಸೇವೆಯನ್ನು ಸ್ಮರಿಸಿದರು.

ಕುಲಪತಿಗಳು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

***Proceedings of the Special meeting of the Syndicate held on 14.06.2022***

**Item No. 01:** 2022–23ನೇ ಸಾಲಿಗೆ ಸಂಯೋಜಿತ ಕಾಲೇಜುಗಳ ಸಂಯೋಜನಾ ನವೀಕರಣದ ಬಗ್ಗೆ ಮತ್ತು ಸ್ಥಳೀಯ ವಿಚಾರಣಾ ಸಮಿತಿಯ ಪರಿವೀಕ್ಷಣೆಯ ಬಗ್ಗೆ.

**ನಿರ್ಣಯ:**

ಕುಲಸಚಿವರು ಮಾತನಾಡಿ ಸರ್ಕಾರ ನೂತನವಾಗಿ ಅಳವಡಿಸಿರುವ ಯು.ಯು.ಸಿ.ಎಂ.ಎಸ್ (Unified Universities and Colleges Management System) ಸಾಫ್ಟ್‌ವೇರ್‌ನಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳು ಸಂಯೋಜಿತ ಕಾಲೇಜುಗಳ ವಿವರ, ಕೋರ್ಸುಗಳು ಹಾಗೂ ವಿದ್ಯಾರ್ಥಿ ಪ್ರಮಾಣದ ವಿವರಗಳನ್ನು ಒದಗಿಸಿ ದಿನಾಂಕ 15.06.2022 ರೊಳಗೆ ಅಧಿಸೂಚಿಸಬೇಕೆಂದು ಸರ್ಕಾರ ನಿರ್ದೇಶನ ನೀಡಿದೆ. ಕಾರಣ ದಿನಾಂಕ 20.06.2022 ರಂದು ಪದವಿ ಪೂರ್ವ ಪರೀಕ್ಷೆಯ ಫಲಿತಾಂಶ ಪ್ರಕಟವಾಗಬಹುದಾಗಿರುವುದರಿಂದ ಅದಕ್ಕಿಂತ ಮೊದಲೇ ಮೇಲ್ಕಂಡ ವಿವರಗಳನ್ನು ಸಲ್ಲಿಸಬೇಕಾಗಿದ್ದು ಹಾಗೂ ಸರ್ಕಾರ 2022–23 ನೇ ಸಾಲಿನಿಂದ ಸರ್ಕಾರಿ ಕಾಲೇಜುಗಳು ಸೇರಿ ಎಲ್ಲಾ ಸಂಯೋಜಿತ ಕಾಲೇಜುಗಳಲ್ಲಿ ಪ್ರಥಮ ವರ್ಷದ ಪದವಿ ಪ್ರವೇಶವನ್ನು ಯು.ಯು.ಸಿ.ಎಂ.ಎಸ್ ಮೂಲಕವೇ ನಿರ್ವಹಿಸುತ್ತಿರುವುದರಿಂದ, ವಿಶ್ವವಿದ್ಯಾಲಯದ ಸಂಯೋಜನಾ ನವೀಕರಣ, ಹೊಸ ಸಂಯೋಜನೆ ಸಂಬಂಧಿಸಿದ ಕಾರ್ಯಗಳನ್ನು ತುರ್ತಾಗಿ ಪೂರ್ಣಗೊಳಿಸುವ ಅವಶ್ಯಕತೆ ಇರುವುದರಿಂದ ಈ ಸಭೆಯ ಮುಂದೆ ವಿಷಯವನ್ನು ಮಂಡಿಸಲಾಗಿದೆ. ನಾಲ್ಕೈದು ದಿವಸಗಳ ಕಾಲಾವಕಾಶವನ್ನು ಕೋರಿದ್ದು, ದಿನಾಂಕ 20.06.2022 ರೊಳಗಾಗಿ ಸಂಯೋಜಿತ ಕಾಲೇಜುಗಳು ಕೋರ್ಸುಗಳ ವಿವರ ಹಾಗೂ ವಿದ್ಯಾರ್ಥಿ ಪ್ರಮಾಣದ ವಿವರಗಳನ್ನು ಮೇಲ್ಕಂಡ ಸಾಫ್ಟ್‌ವೇರ್‌ನಲ್ಲಿ ಅಳವಡಿಸಿ ಅಧಿಸೂಚಿಸಬೇಕಾಗಿದೆ. ಆದಕಾರಣ ದಿನಾಂಕ 19.06.2022 ರೊಳಗೆ ಸಂಯೋಜನಾ ನವೀಕರಣ ಸಂಬಂಧಿಸಿದ ಕಾರ್ಯಗಳನ್ನು ಪೂರ್ಣಗೊಳಿಸಬೇಕಾಗಿದೆ. ಒಂದು ವೇಳೆ ಈ ಅವಧಿಯೊಳಗೆ ಸಂಯೊಜನಾ ನವೀಕರಣ ಕಾರ್ಯ ಪೂರ್ಣಗೊಳ್ಳದಿದ್ದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 2021–22ನೇ ಸಾಲಿನಲ್ಲಿ ಸಂಯೋಜನೆ ಇದ್ದಂತಹ ಕಾಲೇಜುಗಳು, ಕೋರ್ಸುಗಳು ಹಾಗೂ ವಿದ್ಯಾರ್ಥಿ ಪ್ರಮಾಣ ವಿವರಗಳನ್ನೇ ಯು.ಯು.ಸಿ.ಎಂ.ಎಸ್‌ನಲ್ಲಿ ಪ್ರಥಮ ಪದವಿ ಪ್ರವೇಶಾತಿಗೆ (2022–23ನೇ ಶೈಕ್ಷಣಿಕ ವರ್ಷ) ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಹಾಗೂ ಪ್ರವೇಶ ಪಡೆದುಕೊಳ್ಳಲನುವಾಗಲು ಅಪ್‌ಲೋಡ್ ಮಾಡಬಹುದೇ ಎಂಬುದರ ಬಗ್ಗೆ ಸಿಂಡಿಕೇಟ್ ಸಭೆ ನಿರ್ಣಯಿಸಬೇಕಾಗಿದೆ ಎಂದು ತಿಳಿಸಿದರು.

ಅವರು ಮುಂದುವರೆದು, 282 ಸಂಯೋಜಿತ ಕಾಲೇಜುಗಳಲ್ಲಿ 28 ಬಿ.ಇಡಿ. ಕಾಲೇಜುಗಳ ಸಂಯೋಜನೆಯನ್ನು ತಡವಾಗಿ ಮಾಡಬಹುದಾಗಿದೆ. ಹೊಸದಾಗಿ ಈ ವರ್ಷ 06 ಕಾಲೇಜುಗಳು ಸಂಯೋಜನೆ ಕೋರಿ ಅರ್ಜಿ ಸಲ್ಲಿಸಿವೆ. ಹೊಸ ಕೋರ್ಸು ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ ಸುಮಾರು 36 ಕಾಲೇಜುಗಳು ಅರ್ಜಿ ಸಲ್ಲಿಸಿದ್ದು, ಇನ್ನು ಕೆಲವೊಂದು ಕಾಲೇಜುಗಳಿಂದ ಅರ್ಜಿ ಬರಬಹುದು. ಸಿಂಡಿಕೇಟ್ ಸದಸ್ಯರುಗಳೇ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದರಿಂದ ಕಾಲೇಜುಗಳಿಗೆ ದಿನಾಂಕ 18.06.2022 ರೊಳಗೆ ಭೇಟಿ ನೀಡಿ, ಭೇಟಿ ನೀಡಿದ ದಿನದಂದೇ ವರದಿಯನ್ನು ಸಲ್ಲಿಸಿ ತುರ್ತಾಗಿ ಸಂಯೋಜನೆ ನವೀಕರಣ ಪೂರ್ಣಗೊಳಿಸಬೇಕೆಂದು ಸದಸ್ಯರಲ್ಲಿ ಕೋರಿದರು.

Cynthia Menezes

ಕುಲಪತಿಗಳು ಮಾತನಾಡಿ 282 ಕಾಲೇಜುಗಳ ಪೈಕಿ ಇಲ್ಲಿಯವರೆಗೆ 180 ಕಾಲೇಜುಗಳು ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸಿವೆ. ಉಳಿದ ಕಾಲೇಜುಗಳು ಇನ್ನೂ ಅರ್ಜಿ ಸಲ್ಲಿಸಬೇಕಾಗಿದೆ ಎಂದರು.

ಡಾ. ಗೋವಿಂದರಾಜು ಹಾಗೂ ಶ್ರೀ ಪ್ರೇಮ್ ಸೋಹನ್‌ಲಾಲ್ ರವರುಗಳು ಮಾತನಾಡಿ ವಿಶ್ವವಿದ್ಯಾಲಯ ಕಾಲೇಜುಗಳ ಸಂಯೋಜನಾ ನವೀಕರಣಕ್ಕೆ ನಿಗದಿತ ಅವಧಿಯೊಳಗೆ ಅಧಿಸೂಚನೆ ಹೊರಡಿಸಿ ಕ್ರಮಕೈಗೊಂಡಿದ್ದರೆ ಈಗಿನ ಸಮಸ್ಯೆಯನ್ನು ನಿವಾರಿಸಬಹುದಾಗಿತ್ತು. ಪ್ರಸ್ತುತ ಹೊಸ ಸಂಯೋಜನೆ ಕೋರಿರುವ ಹೊಸ ಕಾಲೇಜುಗಳು, ಹೊಸ ಕೋರ್ಸುಗಳ ಸಂಯೋಜನೆ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ ಅರ್ಜಿ ಸಲ್ಲಿಸಿರುವ ಕಾಲೇಜುಗಳಿಗೆ ದಿನಾಂಕ 18.06.2022 ರೊಳಗೆ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡಿ ವರದಿ ಸಲ್ಲಿಸಬಹುದಾಗಿದೆ. ಉಳಿದ ಕಾಲೇಜುಗಳಿಗೆ ನಂತರ ಭೇಟಿ ನೀಡಿ ವರದಿ ಸಲ್ಲಿಸಬಹುದಾಗಿದೆ. ಈ ಉಳಿದ ಕಾಲೇಜುಗಳ ಕೋರ್ಸು ಹಾಗೂ ವಿದ್ಯಾರ್ಥಿ ಪ್ರಮಾಣದ ವಿವರಗಳನ್ನು ಷರತ್ತು ಬದ್ಧವಾಗಿ ಯು.ಯು.ಸಿ.ಎಂ.ಎಸ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿ ಪ್ರವೇಶಾತಿಗೆ ಅನುಮತಿ ನೀಡಬಹುದಾಗಿದೆ. ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಆಗದ ಕಾಲೇಜುಗಳ ಮೇಲೆ ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

ಶ್ರೀ ವಿಧೇಯ ಬೆಳಗೋಡೆ ಶ್ರೀಕಂಠ ಹಾಗೂ ಶ್ರೀ ಎಂ. ಉದಯಕುಮಾರ್ ರವರು ಮಾತನಾಡಿ ಸ್ಥಳೀಯ ವಿಚಾರಣಾ ಸಮಿತಿಗಳು ಎಲ್ಲಾ ಕಾಲೇಜುಗಳಿಗೆ ಭೇಟಿ ನೀಡಬೇಕಾಗುತ್ತದೆ. ಹೊಸ ಕಾಲೇಜುಗಳಿಗೆ ಮಾತ್ರ ತುರ್ತಾಗಿ ಭೇಟಿ ನೀಡಿ, ನವೀಕರಣಕ್ಕೆ ಸಂಬಂಧಿಸಿದಂತೆ ನಂತರ ಕ್ರಮಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು. ಆದ್ದರಿಂದ ಹಿಂದಿನ ವರ್ಷದಂತೆ ವಲಯವಾರು ಕಾಲೇಜುಗಳನ್ನು ವಿಂಗಡಿಸಿ ಪಟ್ಟಿ ಮಾಡಿ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಹಂಚಿಕೆ ಮಾಡಿದರೆ ಹೊಸ ಕಾಲೇಜು, ಹೊಸ ಕೋರ್ಸು ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದಂತಹ ಕಾಲೇಜುಗಳಿಗೆ ದಿನಾಂಕ 18.06.2022 ರೊಳಗೆ ಭೇಟಿ ನೀಡಿ ವರದಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಪ್ರೊ. ಟಿ.ವಿ. ರಾಜುರವರು ಮಾತನಾಡಿ ಕೆಲವೊಂದು ಸಮಿತಿ ಸದಸ್ಯರುಗಳು ಕಾಲೇಜುಗಳಲ್ಲಿ ಅನಗತ್ಯ ಪ್ರಶ್ನೆಗಳನ್ನು ಕೇಳುತ್ತಾರೆ. ಆದ್ದರಿಂದ ಸ್ಥಳೀಯ ವಿಚಾರಣಾ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿದ ಸಮಯದಲ್ಲಿ ಯಾವ ಮಾಹಿತಿಯನ್ನು ಮಾತ್ರ ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ಮಾರ್ಗಸೂಚಿಯನ್ನು ಹೊರಡಿಸಬೇಕು ಹಾಗೂ ಈ ಸಂಬಂಧ ಒಂದು ಪೂರ್ವಭಾವಿ ಸಭೆ ಮಾಡಬೇಕೆಂದು ತಿಳಿಸಿದರು.

ಡಾ. ಗೋವಿಂದರಾಜು ರವರು ಮಾತನಾಡಿ ಕಾಲೇಜುಗಳ ಸಂಯೋಜನೆ ಹಾಗೂ ಇತರ ಕಾರ್ಯಗಳನ್ನು ನಿರ್ವಹಿಸುವ ಬಗ್ಗೆ ಕಾಲೇಜು ಅಭಿವೃದ್ಧಿ ಮಂಡಳಿ ಕ್ರಮಕೈಗೊಳ್ಳಬೇಕಾಗುತ್ತದೆ. ಆದಷ್ಟು ಬೇಗ ನಿರ್ದೇಶಕರನ್ನು ಕಾಲೇಜು ಅಭಿವೃದ್ಧಿ ಮಂಡಳಿಗೆ ನೇಮಿಸಬೇಕೆಂದು ಒತ್ತಾಯಿಸಿದರು.

ದೀರ್ಘ ಚರ್ಚೆಯ ನಂತರ 2022-23 ನೇ ಸಾಲಿಗೆ ಕಾಲೇಜುಗಳ ಸಂಯೋಜನಾ ನವೀಕರಣ, ಹೊಸ ಸಂಯೋಜನೆ/ ಹೊಸ ಕೋರ್ಸು, ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಸಂಯೋಜನೆ ಕುರಿತಂತೆ ಕೆ.ಎಸ್.ಯು ಅಧಿನಿಯಮ 2000ದ, ಪ್ರಕರಣ 59 (6) ರನ್ವಯ ಹಾಗೂ ಪರಿನಿಯಮಾವಳಿ 34.3 ರನ್ವಯ ಸಿಂಡಿಕೇಟ್ ಪರಿಗಣಿಸಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ಸಿಂಡಿಕೇಟ್ ಸದಸ್ಯರ ನೇತೃತ್ವದಲ್ಲಿ ರಚಿಸಲು ಕುಲಪತಿಗಳಿಗೆ ಅಧಿಕರಿಸಿ ನಿರ್ಣಯಿಸಿತು. ಹಿರಿಯ ಪ್ರಾಧ್ಯಾಪಕರನ್ನು ಮಾತ್ರ ಸ್ಥಳೀಯ ವಿಚಾರಣಾ ಸಮಿತಿಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಬೇಕೆಂದು ಹಾಗೂ ಹಿಂದಿನ ಸಾಲಿನಲ್ಲಿ ಹಂಚಿಕೆ ಮಾಡಿದಂತೆ ವಲಯವಾರು ಕಾಲೇಜುಗಳನ್ನು ಸಮಿತಿಗಳಿಗೆ ಹಂಚಿಕೆ ಮಾಡಬೇಕೆಂದು ಸಿಂಡಿಕೇಟ್ ಸೂಚಿಸಿತು.

Cynthia Menezes
17/06/2022

ಮುಂದುವರೆದು, ಮೊದಲ ಹಂತದಲ್ಲಿ ಹೊಸ ಕೋರ್ಸು, ಹೊಸ ಕಾಲೇಜು, ವಿದ್ಯಾರ್ಥಿ ಪ್ರಮಾಣದ ಹೆಚ್ಚಳದ ಬಗ್ಗೆ ಸಂಬಂಧಿಸಿದ ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿಗಳು ದಿನಾಂಕ 16.06.2022 ರಿಂದ 18.06.2022 ರೊಳಗೆ ಭೇಟಿ ನೀಡಿ ಆಯಾ ದಿನದಂದೇ ವಿಶ್ವವಿದ್ಯಾಲಯಕ್ಕೆ ವರದಿಯನ್ನು ಸಲ್ಲಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು. ಸಂಯೋಜನಾ ನವೀಕರಣ, ಖಾಯಂ ಸಂಯೋಜನೆ ಹಾಗೂ ಬಿ,ಇಡಿ ಕಾಲೇಜುಗಳ ಮುಂದುವರಿಕೆ ಸಂಬಂಧಿಸಿದಂತೆ ದಿನಾಂಕ 18.06.2022 ನಂತರ ಕಾಲೇಜುಗಳಿಗೆ ಭೇಟಿ ನೀಡಿ ವರದಿ ಸಲ್ಲಿಸಬಹುದಾಗಿದೆ ಎಂದು ಅಭಿಪ್ರಾಯ ಪಡಲಾಯಿತು. ದಿನಾಂಕ 20.06.2022 ರಂದು ಪದವಿ ಪೂರ್ವ ಫಲಿತಾಂಶ ಪ್ರಕಟವಾಗಬಹುದಾಗಿರುವುದರಿಂದ 2022–23ನೇ ಶೈಕ್ಷಣಿಕ ಸಾಲಿನ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಷರತ್ತು ಬದ್ಧವಾಗಿ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸಿರುವ ಇತರ ಕಾಲೇಜುಗಳ ಕೋರ್ಸು ಹಾಗೂ ವಿದ್ಯಾರ್ಥಿ ಪ್ರಮಾಣದ ವಿವರಗಳನ್ನು ಯು.ಯು.ಸಿ.ಎಂ.ಎಸ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಸಿಂಡಿಕೇಟ್ ಅನುಮತಿಸಿತು. ಒಂದು ವೇಳೆ ಸ್ಥಳೀಯ ವಿಚಾರಣಾ ಸಮಿತಿಗಳು ಕಾಲೇಜುಗಳ ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡದಿದ್ದರೆ ಸಂಬಂಧಿಸಿದ ಕಾಲೇಜುಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

***Proceedings of the Special meeting of the Syndicate held on 14.06.2022***

**ವಿಷಯ ಸಂಖ್ಯೆ 02:** ಬೆಂಗಳೂರು ವಿಶ್ವವಿದ್ಯಾಲಯದ 56ನೇ ಮಿನಿ ಘಟಿಕೋತ್ಸವದಲ್ಲಿ (ಉಪಸ್ಥಿತರಿರದ) ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.

*ನಿರ್ಣಯ:*

ಕುಲಪತಿಗಳು ಮಾತನಾಡಿ ಮಿನಿ ಘಟಿಕೋತ್ಸವಕ್ಕೆ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಆಹ್ವಾನಿಸಲಾಗುತ್ತದೆ ಎಂದು ತಿಳಿಸಿದರು.

ದೀರ್ಘ ಚರ್ಚೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯದ 56ನೇ ಮಿನಿ ಘಟಿಕೋತ್ಸವದಲ್ಲಿ (in-absentia) ವಿವಿಧ ಪದವಿಗಳಿಗೆ ಅರ್ಹರಾದ ಹಾಗೂ ಪದವಿ ಸ್ವೀಕರಿಸಲಿರುವ ಅಭ್ಯರ್ಥಿಗಳ ಪಟ್ಟಿಗಳನ್ನು ವಿಶ್ವವಿದ್ಯಾಲಯ ಪರಿನಿಯಮಾವಳಿ 15.1 ರನ್ವಯ ಪರಿಗಣಿಸಿ ಸಿಂಡಿಕೇಟ್ ಅನುಮೋದಿಸಿತು.

***Proceedings of the Special meeting of the Syndicate held on 14.06.2022***

**ವಿಷಯ ಸಂಖ್ಯೆ 03:** ಬೆಂಗಳೂರು ವಿಶ್ವವಿದ್ಯಾಲಯದ ಬೋಧಕೇತರ ತಾಂತ್ರಿಕ ಹುದ್ದೆಯಾದ ಕಂಪ್ಯೂಟರ್ ವೃಂದದ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಗಳನ್ನು ರಚಿಸುವ ಬಗ್ಗೆ.

*ನಿರ್ಣಯ:*

ಈ ವಿಷಯವನ್ನು ನಿರ್ಣಯಕ್ಕಾಗಿ ಮುಂದಿನ ಸಿಂಡಿಕೇಟ್ ಮುಂದೆ ಮಂಡಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

17/06/2022

**ವಿಷಯ ಸಂಖ್ಯೆ 04:** ಶ್ರೀಮತಿ ಅಪರ್ಣ ಶಂಕರ್, ಬೆರಳಚ್ಚುಗಾರರು ವಿವಿ ಮುದ್ರಣಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 9407/2014 ಮತ್ತು 9372/2014 ರ ಆದೇಶ ದಿನಾಂಕ 16.07.2021 ರನ್ವಯ ಇವರ ಸೇವಾ ಸಕ್ರಮಾತಿಯನ್ನು ಮಾರ್ಪಡಿಸುವ ಬಗ್ಗೆ.

*ನಿರ್ಣಯ:*

ಶ್ರೀ ಪ್ರೇಮ್ ಸೋಹನ್‌ಲಾಲ್ ರವರು ಮಾತನಾಡಿ ಮೇಲ್ಕಂಡ ವಿಷಯದಲ್ಲಿ ನ್ಯಾಯಾಲಯದ ಆದೇಶದ ವಿರುದ್ಧ ಅಪ್ಪೀಲ್ ಸಲ್ಲಿಸಲು ಅವಕಾಶವಿದ್ದರೆ ಅಪ್ಪೀಲ್ ಸಲ್ಲಿಸಬೇಕೆಂದು ಹಾಗೂ ಅವಕಾಶವಿರದಿದ್ದರೆ ಪಕ್ಷದಲ್ಲಿ ಕಾನೂನು ಅಭಿಪ್ರಾಯ ಪಡೆದು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಶ್ರೀಮತಿ ಅಪರ್ಣ ಶಂಕರ್ ರವರು ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ 9407/2014 ಮತ್ತು 9372/2014 ರಲ್ಲಿ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ 16.07.2021 ರ ಆದೇಶದಲ್ಲಿ ಅವರು ಸೇವಾ ಸಕ್ರಮಾತಿಗೊಂಡ ದಿನಾಂಕದಿಂದ ಗ್ರೂಪ್ 'ಸಿ' ಹುದ್ದೆಗೆ ಪರಿಗಣಿಸಬೇಕೆಂದು ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ.

> "12. Therefore, the University will have to reconsider the case of the first petitioner alone for regularization as Group-C employees as the first petitioners would stand covered by the order passed by this Court on 20th May 2011 in writ petition Nos:9959-9960 of 2011 and no other employee. Therefore, while declining to accept the claim of the petitioners for regularization as Group-C employees, the writ petitioners are disposed off, with a direction to consider the case of the first petitioner in Writ petition No.9407/2014 alone, who was appointed in a Group-C and continues to work as Typist a Group-C post."

ಆದರೆ ಶ್ರೀಮತಿ ಅಪರ್ಣ ಶಂಕರ್ ರವರು ಕೋರಿರುವಂತೆ ಡಿ.ಇ.ಓ / ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಸಕ್ರಮಾತಿಗೊಳಿಸಲು ಸಾಧ್ಯವಿರುವುದಿಲ್ಲ ಕಾರಣ ಮಂಜೂರಾದ ಹುದ್ದೆ ಇರುವುದಿಲ್ಲ. ಈಗಾಗಲೇ ಸಂಬಂಧಿಸಿದ ಕಡತದಲ್ಲಿ ಕಾನೂನು ಅಭಿಪ್ರಾಯ ಪಡೆಯಲಾಗಿದೆ ಎಂದು ತಿಳಿಸಿದರು.

ದೀರ್ಘ ಚರ್ಚೆಯ ನಂತರ ಪರಾಮರ್ಶಿತ ಟಿಪ್ಪಣಿಯಂತೆ ಶ್ರೀಮತಿ ಅಪರ್ಣ ಶಂಕರ್ ರವರ ಸೇವೆಯನ್ನು ಮಂಜೂರಾಗಿರುವ ಬೆರಳಚ್ಚುಗಾರರ ಹುದ್ದೆಗೆ ಎದುರಾಗಿ ಅವರ ಸೇವೆಯನ್ನು ಸಕ್ರಮಾತಿ ದಿನಾಂಕದಿಂದ ಪರಿಗಣಿಸಲು ಸಿಂಡಿಕೇಟ್ ಅನುಮೋದಿಸಿತು.

**ಸಾಮಾನ್ಯ ಚರ್ಚೆ:-**

1. ಕುಲಸಚಿವರು ಮಾತನಾಡಿ ಯು.ವಿ.ಸಿ.ಇ ಯ ಮೆಕ್ಯಾನಿಕಲ್ ಬ್ಲಾಕ್ ಹಾಗೂ ರಾಮನಗರ ಸ್ನಾತಕೋತ್ತರ ಕೇಂದ್ರದ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದ ಕ್ಯಾಬಿನೇಟ್ ಅನುಮೋದನೆ ದೊರೆತಿದ್ದು, ಈ ನಿರ್ಮಾಣ ವೆಚ್ಚದ ಮೊದಲ ಕಂತಿನ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಸಿಂಡಿಕೇಟ್ ಸೂಕ್ತ ಮಾರ್ಗದರ್ಶನ/ಸಲಹೆ ನೀಡಬೇಕೆಂದು ಕೋರಿದರು.

Syndicate Members ../../2022

ಕುಲಪತಿಗಳು ಮಾತನಾಡಿ ಈ ಬಗ್ಗೆ ಸಂಪೂರ್ಣ ಹಣಕಾಸಿನ ವಿವರಗಳನ್ನು ಹಣಕಾಸು ವಿಭಾಗದಿಂದ ಸಲ್ಲಿಸಬೇಕಿದೆ. ಹಣಕಾಸಿನ ವಿವರಗಳನ್ನು ಸಲ್ಲಿಸಿದ ಮೇಲೆ ಸೂಕ್ತ ನಿರ್ಣಯ ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಡಾ. ಗೋವಿಂದರಾಜು ಮಾತನಾಡಿ ವಿಶ್ವವಿದ್ಯಾಲಯದ ಹಣಕಾಸು ಖಾತೆಯಲ್ಲಿ ಪ್ರಸ್ತುತ ರೂ. 14.00 ಕೋಟಿ ಮಾತ್ರ ಇದೆ ಎಂದು ಕೆಲವರು ಮಾಹಿತಿ ನೀಡುತ್ತಿದ್ದಾರೆ. ಆದರೆ ಇನ್ನೂ ಹೆಚ್ಚಿನ ಹಣ ವಿಶ್ವವಿದ್ಯಾಲಯದ ಖಾತೆಗಳಲ್ಲಿ ಇದೆ ಎಂಬುದರ ಬಗ್ಗೆ ಊಹಾಪೋಹಗಳು ಹಬ್ಬಿಸುತ್ತಿದ್ದಾರೆ. ಆದುದರಿಂದ ಒಂದು ನಿಖರ ಮಾಹಿತಿ ಪಡೆದು, ವಿಶ್ವವಿದ್ಯಾಲಯದ ಹಣಕಾಸಿನ ವಸ್ತು ಸ್ಥಿತಿಯ ಬಗ್ಗೆ ಒಂದು ಶ್ವೇತ ಪತ್ರ ಹೊರಡಿಸಬೇಕು. ವಿಶ್ವವಿದ್ಯಾಲಯದಲ್ಲಿ ಹಣದ ಕೊರತೆ ಇಲ್ಲದಿದ್ದಲ್ಲಿ ಮೇಲ್ಕಂಡ ಕಾಮಗಾರಿಗಳಿಗೆ ಹಣ ಮಂಜೂರು ಮಾಡಬಹುದಾಗಿದೆ ಎಂದು ತಿಳಿಸಿದರು. ಪ್ರೊ. ಟಿ.ವಿ. ರಾಜುರವರು ಮಾತನಾಡಿ ವಿಶ್ವವಿದ್ಯಾಲಯದ ಹಣಕಾಸಿನ ಸ್ಥಿತಿ ಬಗ್ಗೆ ಒಂದು ಶ್ವೇತ ಪತ್ರ ಹೊರಡಿಸುವುದು ಒಳಿತೆಂದು ಅಭಿಪ್ರಾಯ ಪಟ್ಟು ಅವರನ್ನು ಹಣಕಾಸು ಸಮಿತಿಯ ಸದಸ್ಯತ್ವದಿಂದ ಹಾಗೂ ಶ್ರೀ ಎಂ. ಉದಯಕುಮಾರ್ ರವರನ್ನು ಕಾಮಗಾರಿ ಸಮಿತಿಯ ಸದಸ್ಯತ್ವದಿಂದ ಸಿಂಡಿಕೇಟ್ ಅನುಮೋದನೆಯಿಲ್ಲದೇ ತೆಗೆದಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದರು.

ಕುಲಪತಿಗಳು ಮಾತನಾಡಿ ಹಣಕಾಸು ವಸ್ತುಸ್ಥಿತಿ ಬಗ್ಗೆ ಮಾಹಿತಿ ಪಡೆದು ಸಲ್ಲಿಸುವುದಾಗಿ ತಿಳಿಸಿದರು. ಅವರು ಮುಂದುವರೆದು ಹಿಂದೆ ಇದ್ದಂತೆ ಪ್ರೊ. ಟಿ.ವಿ. ರಾಜುರವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ಹಾಗೂ ಶ್ರೀ ಎಂ. ಉದಯಕುಮಾರ್ ರವರನ್ನು ಕಾಮಗಾರಿ ಸಮಿತಿಯ ಸದಸ್ಯರನ್ನಾಗಿ ಮುಂದುವರೆಸುವುದಾಗಿ ಸಿಂಡಿಕೇಟ್‌ಗೆ ಉತ್ತರಿಸಿದರು.

2. ಶ್ರೀ ಪ್ರೇಮ್ ಸೋಹನ್‌ಲಾಲ್ ರವರು ಮಾತನಾಡಿ ಹಿಂದಿನ ಸಾಲಿನಲ್ಲಿ ಪ್ರಕಟಿಸಿರುವ 6ನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶದಲ್ಲಿ ವ್ಯತ್ಯಯ ಇದ್ದು, ಕೆಲವೊಂದು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತೀರ್ಣ ಎಂದು ಫಲಿತಾಂಶ ಪ್ರಕಟಿಸಿ ಅಂಕಪಟ್ಟಿ ನೀಡಲಾಗಿದೆ. ಕೆಲವೊಂದು ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದಿದ್ದು, ಪ್ರವೇಶ ಅನುಮೋದನೆ ಸಂದರ್ಭದಲ್ಲಿ ಆ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆಂದು ಪ್ರವೇಶ ಅನುಮೋದನೆ ನೀಡಿರುವುದಿಲ್ಲವೆಂದು ತಿಳಿಸಿದರು. ಪ್ರೊ. ಯು.ವಿ. ಚಂದರಗಿ ರವರು ಮಾತನಾಡಿ ಒಂದು ಸಮಿತಿ ಮಾಡಿ ವರದಿ ಪಡೆದುಕೊಂಡು ವರದಿಯನುಸಾರ ಕ್ರಮಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ ಕಳೆದ ಸಾಲಿನಲ್ಲಿ ಪ್ರಕಟಗೊಂಡಿರುವ 6ನೇ ಸೆಮಿಸ್ಟರ್ ಪರೀಕ್ಷಾ ಫಲಿತಾಂಶದಲ್ಲಿ ಆಗಿರುವ ವ್ಯತ್ಯಯಗಳನ್ನು ಪರಿಶೀಲಿಸಿ ವರದಿ ನೀಡಲು ಹಾಗೂ ಈ ಬಗ್ಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಲು ಮತ್ತು ವಿದ್ಯಾರ್ಥಿಗಳ ಕುಂದುಕೊರತೆ ಮತ್ತು ಪರೀಕ್ಷಾ ಸುಧಾರಣಾ ಬಗ್ಗೆ ಹಿರಿಯರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು.

Cynthia Menezes
17/06/2022

1. ಪ್ರೊ. ಟಿ.ವಿ ರಾಜು – ಅಧ್ಯಕ್ಷತೆ
2. ಪ್ರೊ. ಯು.ವಿ ಚಂದರಗಿ, ಜಂಟಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ – ಸದಸ್ಯರು
3. ಶ್ರೀ ಉದಯಕುಮಾರ್. ಎಂ – ಸದಸ್ಯರು
4. ಶ್ರೀ ಪ್ರೇಮ್ ಸೋಹನ್‌ಲಾಲ್ – ಸದಸ್ಯರು
5. ಡಾ. ಸುಧಾಕರ್.ಎಚ್ – ಸದಸ್ಯರು
6. ಉಪಕುಲಸಚಿವರು ಪರೀಕ್ಷಾ ವಿಭಾಗ – ಸಂಚಾಲಕರು

3. 75ನೇ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ವಿಶ್ವವಿದ್ಯಾಲಯದಲ್ಲಿ ನಿರ್ಮಿಸಿರುವ ಧ್ವಜ ಸ್ಥಂಭವನ್ನು ನಿರ್ವಹಿಸಲು ಈ ಕೆಳಕಂಡ ಸಮಿತಿಯನ್ನು (Flag Committee) ರಚಿಸಲು ಸಿಂಡಿಕೇಟ್ ಅನುಮೋದಿಸಿತು.

   1. ಪ್ರಾಂಶುಪಾಲರು, ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಕಾಲೇಜು – ಸದಸ್ಯರು
   2. ಶ್ರೀ ಬಿ.ಟಿ. ಚಂದ್ರಶೇಖರ್, ವಿಶ್ವವಿದ್ಯಾಲಯ ಅಭಿಯಂತರರು – ಸದಸ್ಯ – ಕಾರ್ಯದರ್ಶಿ
   3. ಸಹಾಯಕ ಕುಲಸಚಿವರು, ಸಂಪತ್ತಿ ವಿಭಾಗ – ಸದಸ್ಯರು

4. ಕುಲಪತಿಗಳು ಮಾತನಾಡಿ ಸೆಂಟರ್ ಫಾರ್ ಸ್ಕಿಲ್ ಡೆವಲಪ್‌ಮೆಂಟ್ ಅನ್ನು ಪ್ರಾರಂಭಿಸಿದರೆ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಸಂದರ್ಶನ ಎದುರಿಸಲು ಸೂಕ್ತ ತರಬೇತಿ ನೀಡಲು ಅನುಕೂಲವಾಗುವುದೆಂದು ತಿಳಿಸಿದರು.

   ಚರ್ಚೆಯ ನಂತರ ಸೆಂಟರ್ ಫಾರ್ ಸ್ಕಿಲ್ ಡೆವಲಪ್‌ಮೆಂಟ್ ಪ್ರಾರಂಭಿಸಲು ಸಿಂಡಿಕೇಟ್ ಅನುಮೋದಿಸಿ ಈ ಸಂಬಂಧ ಪರಿಣಿತರನ್ನೊಳಗೊಂಡ ಸಮಿತಿ ರಚಿಸಲು ಕುಲಪತಿಗಳಿಗೆ ಅಧೀಕರಿಸಿತು.

5. ಡಾ. ಎಚ್. ಸುಧಾಕರ್ ರವರನ್ನು ಎಸ್ಸಿ / ಎಸ್ಟಿ ಸುಧಾರಣಾ ಸಮಿತಿಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

6. ಡಾ. ಟಿ.ವಿ. ರಾಜು ರವರು ಮಾತನಾಡಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅನುಕೂಲಕ್ಕೆ Personality Development Programme ಅನ್ನು ಆಯೋಜಿಸಬೇಕೆಂದು ತಿಳಿಸಿದರು.

   ಚರ್ಚೆಯ ನಂತರ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ Personality Development Programme ಅನ್ನು ಆಯೋಜಿಸಲು ಅನುಮೋದಿಸಿ ಈ ಸಂಬಂಧ ಪ್ರಸ್ತಾವನೆ ಸಲ್ಲಿಸಲು ಪ್ರೊ. ಟಿ.ವಿ. ರಾಜುರವರಿಗೆ ಸೂಚಿಸಿತು.

7. 2021–22ನೇ ಶೈಕ್ಷಣಿಕ ಸಾಲಿಗೆ ಟಿ. ಜಾನ್ ಇನ್ಸಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಕಾಲೇಜಿನ ಸಂಯೋಜನೆಯ ನಿಮಿತ್ತ ನೇಮಕ ಮಾಡಿದ್ದ ಶ್ರೀ ಉದಯಕುಮಾರ್, ಎಂ, ಸಿಂಡಿಕೇಟ್ ಸದಸ್ಯರು ಇವರ ನೇತೃತ್ವದಲ್ಲಿ ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಕೆ.ಎಸ್.ಯು ಅಧಿನಿಯಮ 2000ದ, ಪ್ರಕರಣ 59 (9) ರಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

Jyothia Ningu
17/06/2022

8. ಕುಲಸಚಿವರು ಮಾತನಾಡಿ ಸಧ್ಯದಲ್ಲೇ ಮರು ಮೌಲ್ಯಮಾಪನಕ್ಕೆ ನ್ಯಾಕ್ ಸಮಿತಿ ಭೇಟಿ ನೀಡುವುದರಿಂದ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಹಾಗೂ ಹಾಸ್ಟೆಲ್‌ಗಳಲ್ಲಿ ರಿಪೇರಿ ಕಾರ್ಯಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿದೆ. ಈ ಬಗ್ಗೆ ಸಿಂಡಿಕೇಟ್ ಅನುಮೋದನೆ ಬೇಕಾಗಿದೆ.

ಶ್ರೀ ಎಂ. ಉದಯಕುಮಾರ್ ರವರು ಮಾತನಾಡಿ ಹಾಸ್ಟೆಲ್‌ಗಳ ರಿಪೇರಿ ಕಾರ್ಯಗಳನ್ನು ತುರ್ತಾಗಿ ಕೈಗೊಂಡು ಅನುಸಮರ್ಥನೆಗೆ ನಂತರ ಸಿಂಡಿಕೇಟ್‌ಗೆ ಮಂಡಿಸಿ ಎಂದು ತಿಳಿಸಿದರು.

ಚರ್ಚೆಯ ನಂತರ ನ್ಯಾಕ್ ಸಮಿತಿ ಭೇಟಿ ನಿಮಿತ್ತ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಹಾಗೂ ಹಾಸ್ಟೆಲ್‌ಗಳಲ್ಲಿ ರಿಪೇರಿ ಕಾರ್ಯಗಳನ್ನು ತುರ್ತಾಗಿ ಕೈಗೊಳ್ಳಲು ಸಿಂಡಿಕೇಟ್ ಅನುಮೋದಿಸಿತು. ನಂತರ ವಿವರಗಳನ್ನು ಮಂಡಿಸಲು ಅನುಸಮರ್ಥನೆಗೆ ಸಿಂಡಿಕೇಟ್ ಅನುಮೋದಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

Cynthia Menezes
17/06/2022

**ಕುಲಪತಿಯವರು**